# ತುಂಟನಿವನು ಕಾಣಮ್ಮ ಗೋಪಾಲನು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 68.
2. **Note:** This kruti is not available in other standard books that I referred.

ರಾಗ: ಕಲ್ಯಾಣಿ ತಾಳ: ಅಟ

ತುಂಟನಿವನು ಕಾಣಮ್ಮ ಗೋಪಾಲನು
ಉಂಟೋ ಇಲ್ಲವೊ ಕೇಳಮ್ಮ ॥ ಪ ॥

ಎಂಟೆರಡು ಸಾವಿರ ನಂತರ ಹೆಂಗಳ
ತುಂಟುಮಾಡಿ ರವಿಕೆ ಗಂಟು ಬಿಚ್ಚಿ ನಿಂತ ॥ ಅಪ ॥

ಹಸಿರು ಪಟ್ಟೆಯನು ಉಟ್ಟು – ನಮ್ಮನೆ ಹೆಣ್ಣು
ಮೊಸರು ಕಡೆಯುತಿರಲು
ನಸುನಗುತಲಿ ಬಂದು ಕುಸುಮ ಮಲ್ಲಿಗೆ ಮುಡಿಸಿ
ಬಸಿರು ಮಾಡಿದನೆಂಥ ಹಸುಳನೆ ಗೋಪಿ ॥ 1 ॥

ಮುದ್ದು ನಾರಿಯರು ಕೂಡಿ – ನಮ್ಮನೆಯಲಿ
ಉದ್ದಿನ ವಡೆಯ ಮಾಡಲು
ಸದ್ದು ಮಾಡದೆ ಬಂದು ಎದ್ದೆದ್ದು ನೋಡುತ
ಇದ್ದ ವಡೆಯನೆಲ್ಲ ಕದ್ದು ಮೆದ್ದೋಡಿದ ॥ 2 ॥

ಗೊಲ್ಲ ಬಾಲಕರ ಕೂಡಿ – ಮನೆಯಲಿದ್ದ
ಎಲ್ಲ ಬೆಣ್ಣೆಯ ಮೆಲ್ಲಲು
ಗುಲ್ಲು ಮಾಡದೆ ನಾವು ಎಲ್ಲರು ಒಂದಾಗಿ
ತಳ್ಳ ಹೋದರೆ ನಮಗೆ ಬೆಲ್ಲವ ತೋರಿದ ॥ 3 ॥

ಹೊತ್ತು ಮುಳುಗುವ ಸಮಯದಿ – ನಮ್ಮನೆ ಹೆಣ್ಣು
ಹತ್ತಿ ಹೊಸೆಯುತಿರಲು

ಮುತ್ತು ಹವಳ ಸರ ಕತ್ತಿಗೆ ಹಾಕಿ ಸೀರೆ
ಎತ್ತಿ ನೋಡಿದನು ತಾ ಬತ್ತಲೆ ನಿಂತ  || 4 ||

ತಿಲಕ ಕತ್ತುರಿಯನಿಟ್ಟು – ನಮ್ಮನೆ ಹೆಣ್ಣು
ಗಿಲುಕು ಮಂಚದಲಿರಲು
ತಿಲಕ ತಿದ್ದುತ ಕುಚಕಲಶ ಪಿಡಿದು ತನ್ನ
ಕೆಲಸವ ತೀರಿಸಿದ ಪುರಂದರ ವಿಠಲ  || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪಸ್ತ್ರೀಯೊಬ್ಬಳು ಶ್ರೀ ಕೃಷ್ಣನ ಮೇಲೆ ದೂರು ಹೇಳುತ್ತಿದ್ದಾಳೆ.

**ರವಿಕೆ = ಕುಪ್ಪುಸ**

**ಪಟ್ಟೆ = ಸೀರೆ**

**ಬೆಲ್ಲವ ತೋರು = ಮುದ್ದು ಕೊಡಿರೆಂದು ಹೇಳು**

**ಗಿಲುಕು =** ಗೆಜ್ಜೆಯ ಸಣ್ಣ ದನಿ, ಗಿಲ ಗಿಲ ಶಬ್ದ ಮಾಡುವಿಕೆ, ಮೋಜಿನ ಮಾತುಗಾರಿಕೆ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** Krishna, gopi, Gopala, hengasu, nage, mallige, benne, bella, Kasturi, mancha, hennu,
**Pravachana:** NA
**Explanation:** NA